429

ಮೈಸೂರ ಗೆಜಿಟ್.

ವಿಶೇಷ ಪತ್ರಿಕೆ.

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶುಕ್ರವಾರ, ಡಿಸೆಂಬರ್ ತಾ॥ 9, ಸ॥ 1904.

1904ನೆಯ ಡಿಸೆಂಬರ್ ತಾರೀಖು 9.

ಮೈಸೂರು ಶ್ರೀಮತ್ ಮಹಾರಾಜ ಸಾಹೇಬ ಹದರವರ ಈ ಕೆಳಗಿನ ಲೇಖನವು ಪ್ರಕಟನಲ್ಪಟ್ಟಿದೆ.

ಬಿಮೋಜೇಬ್ ಹುಕುಂ,

ಬಿ. ಕೆ. ವೆಂಕಟವರದೈಯ್ಯಂಗಾರ್,

ಮೈಸೂರು ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಯ ಸೆಕ್ರಟರಿ.

1875

430

ಮೈಸೂರು ಅರಮನೆ,

1904ನೆಯ ಡಿಸೆಂಬರ್ ತಾರೀಖು 8.

ನಮ್ಮ ಪ್ರಿಯ ಸಹೋದರಿಯವರಾದ ಸೌಭಾಗ್ಯವತೀ ಮಹಾರಾಜ ಕುಮಾರಿ ಕೃಷ್ಣಾಜಮ್ಮಣ್ಣಿಯವರು ಅಕಾಲದಲ್ಲಿ ಸ್ವರ್ಗಸ್ಥರಾದ ದುಃಖದ ವೇಳೆಯಲ್ಲಿ ಈ ಸಂಸ್ಥಾನದಲ್ಲಿರುವ ನಮ್ಮ ಸ್ವಂತ ಪ್ರಜೆಗಳಿಂದಲೂ ನಮ್ಮ ದೇಶದ ಹೊರಗೆ ಇರುವ ನಮ್ಮವರಲ್ಲಿ ಅನುತಾಪ ಉಳ್ಳವರಿಂದಲೂ ನಮಗೆ ತಲಪಿದ ಅನೇಕ ಅನುತಾಪ ದುಃಖ ಸೂಚಕೋಕ್ತಿಗಳಿಂದ ನಮ್ಮ ಮನಸ್ಸು ಬಹಳವಾಗಿ ಕರಗಿತು. ನಮ್ಮ ಕುಟುಂಬದಲ್ಲಿ ಅತ್ಯಂತ ಪ್ರೀತಿಯುಕ್ತರು, ಪತಿಯಲ್ಲಿ ಭಕ್ತಿಯುಳ್ಳವರು, ಮಕ್ಕಳಲ್ಲಿ ಪ್ರೇಮವುಳ್ಳವರು ಆದ ನಮ್ಮ ಸಹೋದರಿಯವರ ವಿಯೋಗವನ್ನು ಎಂದಿಗೂ ಮರೆಯಲಾಗುವುದಿಲ್ಲ. ಇಂತಹ ಕಷ್ಟಕಾಲದಲ್ಲಿ ದುರ್ಜ್ಞೇಯವಾದ ಭಗವಂತನ ಸಂಕಲ್ಪವನ್ನು ಶಿರಸಾವಹಿಸುವುದೇ ನಮ್ಮ ಕರ್ತವ್ಯವೆಂಬಾಗಿದೆ. ನಮ್ಮ ಮತ್ತು ನಮ್ಮ ಕುಟುಂಬದ ಸಂಗಡ ಈ ದುಃಖದಲ್ಲಿ ಭಾಗಿಗಳಾಗಿದ್ದು ಸಮಾಧಾನವನ್ನೂ ದುಃಖ ಶಮನವನ್ನೂ ಉಂಟುಮಾಡಿದ ಸರ್ವರಿಗೂ ನಮ್ಮ ಹೃದ್ಗತವಾದ ಕೃತಜ್ಞತೆಯನ್ನು ತಿಳಿಸಲಪೇಕ್ಷಿಸುತ್ತೇವೆ.

ಕೃಷ್ಣರಾಜ ಒಡೆಯರ್.